<u>ಅಸಲು ದಾವಾ ಸಂಖ್ಯೆ</u> **- 332/2016** ಪಿ.ಡಬ್ಲ್ಯೂ.**:-1**

ದಿನಾಂಕಃ **23.04.2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು:- ಪ್ರತಿವಾದಿ ಪರ ಶ್ರೀ.ಕೆಕೆಹೆಚ್ ವಕೀಲರಿಂದಃ-</u>

ನಾನು ಎಸ್.ಎಸ್.ಎಲ್.ಸಿ ವರೆಗೂ ಓದಿಕೊಂಡಿರುತ್ತೇನೆ. ನಾನು ಹುಟ್ಟಿನಿಂದಲೂ ಬಸವನಹಳ್ಳಿ ಗ್ರಾಮದಲ್ಲಿ ವಾಸವಿರುತ್ತೇನೆ. ನನ್ನ ಅಜ್ಜನ ಹೆಸರು ವೀರಪ್ಪ. ನನ್ನ ಅಜ್ಜನಿಗೆ ಈರಪ್ಪ ಅಂತಲೂ ಸಹ ಕರೆಯುತ್ತಿದ್ದರು ಎಂದರೆ ಸರಿ. ನನ್ನ ಅಜ್ಜಿನ ಹೆಸರು ಕಾಳಮ್ಮ. ನಮ್ಮ ಅಜ್ಜನಿಗೆ ನಮ್ಮ ತಂದೆ ಒಬ್ಬರೇ ಮಗ. ನಮ್ಮ ಅಜ್ಜನಿಗೆ ಬೇರೆ ಇಬ್ಬರು ಹೆಣ್ಣು ಮಕ್ಕಳು ಕೂಡ ಇದ್ದಾರೆ ಎಂದರೆ ಸರಿಯಲ್ಲ. ಒಬ್ಬರು ಹೆಣ್ಣು ಮಗಳು ಇದ್ದಾರೆ ಎಂದು ನುಡಿಯುತ್ತಾರೆ. ಅವರ ಹೆಸರು ಸರಸ್ವತಮ್ಮ. ಸರಸ್ವತಮ್ಮನವರಿಗೆ ಗಂಗಮ್ಮ ಎಂಬ ಅಕ್ಕ ಕೂಡ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಸರಸ್ವತಮ್ಮನವರನ್ನು ಗಣೇಶಪ್ಪ ಎಂಬುವವರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ. ಗಂಗಮ್ಮನವರನ್ನು ಗಣೇಶಪ್ಪರವರ ಅಣ್ಣ ಹನುಮಂತಪ್ಪನವರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಗಂಗಮ್ಮ ಮತ್ತು ಹನುಮಂತಪ್ಪನವರಿಗೆ ಮಕ್ಕಳು ಇರುವ ವಿಚಾರ ಗೊತ್ತಿದೆ ಎಂದರೆ ಸರಿ. ಸದರಿ ಗಂಗಮ್ಮ ಮತ್ತು ಹನುಮಂತಪ್ಪನವರಿಗೆ ಮಕ್ಕಳು ಇರುವ ವಿಚಾರ ನನ್ನ ವಾದಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ಅದೇ ರೀತಿ ಗಂಗಮ್ಮ ಮತ್ತು ಸರಸ್ವತಮ್ಮನವರ ವಿಚಾರವನ್ನು ನನ್ನ ಮುಖ್ಯ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ಗಂಗಮ್ಮ ಮತ್ತು ಹನುಮಂತಪ್ಪನವರ ಮಕ್ಕಳನ್ನು ನಾನು ಈ ದಾವೆಯಲ್ಲಿ ಸೇರಿಸಿಲ್ಲ ಮತ್ತು ಅವರನ್ನು ದಾವೆಗೆ ಸೇರಿಸುವುದಕ್ಕೆ ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಅವರ ಅವಶ್ಯಕತೆ ಈ ದಾವೆಗೆ ಇರಲಿಲ್ಲ ಹಾಗಾಗಿ ಸೇರಿಸಿಲ್ಲ ಎಂದು ನುಡಿಯುತ್ತಾರೆ.

1 ನೇ ವಾದಿ ನನ್ನ ತಾಯಿ, 2 ನೇ ವಾದಿ ನನ್ನ ಅಣ್ಣ, 4 ನೇ ವಾದಿ ನನ್ನ ತಮ್ಮ. ವಾದಪತ್ರದಲ್ಲಿರುವ ಸಹಿಗಳು ನನ್ನದು ಮತ್ತು ಉಳಿದ ವಾದಿಗಳಾಗಿರುತ್ತದೆ. ನಾವೆಲ್ಲರೂ ವಾದಪತ್ರದಲ್ಲಿ ಒಟ್ಟಿಗೆ ಸಹಿ ಹಾಕಿರುತ್ತೇವೆ. ಪ್ರತಿವಾದಿ 1 ರಿಂದ 3 ರವರು ಸಹೋದರ, ಸಹೋದರಿಯರಾಗಿರುತ್ತಾರೆ. 4 ನೇ ಪ್ರತಿವಾದಿ 2 ನೇ ಪ್ರತಿವಾದಿಯ ಮಗ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.